# ಪ್ಲಸ್ ಲೇ ಪ್ಲಸ್ ಶೋ!

ಪ್ರಾದೇಶಿಕ ಭಾಷೆಗಳ ಮೂಲಕ ಭಾರತದಲ್ಲಿ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬಹುದು ಎಂಬುದನ್ನು ಈ ವೇದಿಕೆಗಳ ಪ್ರತಿನಿಧಿಗಳು ಅಲ್ಲಿ–ಇಲ್ಲಿ ಹೇಳಿದ್ದಾರೆ ಕೂಡ.

ಜಿಯೊ ಫೈಬರ್ ಬ್ರಾಡ್‌ಬ್ಯಾಂಡ್ ಸೇವೆ ಹಾಗೂ ಅದರ ಭಾಗವಾಗಿಯೇ ಬರುವ ಒಟಿಟಿ ವೇದಿಕೆಗಳ ಲಭ್ಯತೆ ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿ ಹೆಚ್ಚು ಕಾರ್ಯಕ್ರಮಗಳು ಸಿದ್ಧವಾಗಲು ಕಾರಣವಾಗಬಹುದು ಎಂಬುದು ಜಿಯೊ ಬ್ರಾಡ್‌ಬ್ಯಾಂಡ್ ಕುರಿತ ಮಾತುಕತೆಗಳಲ್ಲಿ ಗಮನಿಸಬೇಕಾದ ಅಂಶ.

‘ದೇಶದಲ್ಲಿ ಒಳ್ಳೆಯ ಹೂರಣ (ಕಂಟೆಂಟ್) ಒದಗಿಸುವ ಒಟಿಟಿ ವೇದಿಕೆಗಳು ಹಲವಿವೆ. ಆದರೆ ಆ ಎಲ್ಲ ವೇದಿಕೆಗಳ ಹೆಸರು ಜನರಿಗೆ ಗೊತ್ತಿಲ್ಲ. ಅವುಗಳನ್ನು ಹೇಗೆ ಪಡೆದುಕೊಳ್ಳಬೇಕು ಎಂಬುದೂ ಬಹಳಷ್ಟು ಮಂದಿಗೆ ಗೊತ್ತಿಲ್ಲ. ಹಾಗಾಗಿ, ಅವುಗಳಲ್ಲಿ ಲಭ್ಯವಿರುವ ಒಳ್ಳೆಯ ಮನರಂಜನಾ ಕಾರ್ಯಕ್ರಮಗಳನ್ನು ವೀಕ್ಷಿಸುವುದು ಸಾಧ್ಯವಿಲ್ಲದ ಮಾತು. ಒಟಿಟಿ ವೇದಿಕೆಗಳು ಸದ್ಯಕ್ಕೆ ಇಂಟರ್ನೆಟ್ ಸಾಕ್ಷರರಿಗೆ ಮಾತ್ರ ಲಭ್ಯವಿರುವುದೇ ಅವುಗಳ ಒಂದು ಮಿತಿ. ಒಂದು ವೇಳೆ, ಈ ವೇದಿಕೆಗಳಲ್ಲಿ ಇರುವ ಕಾರ್ಯಕ್ರಮಗಳನ್ನು ಟಿ.ವಿ. ವಾಹಿನಿಗಳ ವೀಕ್ಷಕರ ಎದುರು ತಂದಿಡುವ ರೀತಿಯಲ್ಲಿ ಕೊಟ್ಟರೆ, ಅವುಗಳನ್ನು ಹೆಚ್ಚು ಜನ ವೀಕ್ಷಿಸುವ ಸಾಧ್ಯತೆ ಇದೆ’ ಎನ್ನುತ್ತಾರೆ ‘ಹರಿವು ಕ್ರಿಯೇಷನ್ಸ್’ ಕಂಪನಿಯ ಗೌತಮ್ ಹೆಗ್ಡೆ.

‘ಒಟಿಟಿ ವೇದಿಕೆಯೊಂದು ಇದೆ ಎಂಬುದು ಗೊತ್ತಾಗುವುದು ಹಾಗೂ ಅದನ್ನು ಬಳಸಲು ಹೆಚ್ಚಿನ ಜನರಿಗೆ ಸಾಧ್ಯವಾಗುವುದು ಅವುಗಳ ವ್ಯಾಪ್ತಿ ಹಿಗ್ಗಿಸಲು ಬಹುಮುಖ್ಯ ಅಂಶ. ಜಿಯೊ ಫೈಬರ್ ಕಾರಣದಿಂದಾಗಿ ಇಂತಹ ವೇದಿಕೆಗಳು ಟಿ.ವಿ. ಮೂಲಕವೇ ಜನರನ್ನು ತಲುಪುವಂತೆ ಆಗಲಿದೆ’ ಎನ್ನುತ್ತಾರೆ ಹೆಗ್ಡೆ.

> ‘ಜಿಯೊ ಫೈಬರ್ ಕಾರಣದಿಂದಾಗಿ ಮನರಂಜನಾ ಕಾರ್ಯಕ್ರಮಗಳಲ್ಲಿನ ವೈವಿಧ್ಯ ಜಾಸ್ತಿ ಆಗುತ್ತದೆ. ಬರೀ ಇಂಗ್ಲಿಷ್ ಅಥವಾ ಹಿಂದಿ ಕಾರ್ಯಕ್ರಮ ವೈವಿಧ್ಯ ಹೆಚ್ಚಾಗುವುದಲ್ಲ; ಪ್ರಾದೇಶಿಕ ಭಾಷಾ ಕಾರ್ಯಕ್ರಮಗಳ ವೈವಿಧ್ಯ ಕೂಡ ಜಾಸ್ತಿ ಆಗುತ್ತದೆ. ಇದರಲ್ಲಿ ಕನ್ನಡಕ್ಕೂ ಲಾಭವಿದೆ’

ಒಟಿಟಿ ವೇದಿಕೆಗಳ ಬೆಳವಣಿಗೆ ಈಚೆಗೆ ಗಮನಾರ್ಹವಾಗಿದ್ದರೂ, ಹೆಚ್ಚಿನ ಜನ ಮನರಂಜನೆಗೆ ನೆಚ್ಚಿಕೊಂಡಿರುವುದು ಟಿ.ವಿ. ವಾಹಿನಿಗಳನ್ನು. ‘ಒಟಿಟಿ ವೇದಿಕೆಗಳ ಶೇಕಡ 55ರಷ್ಟು ಗ್ರಾಹಕರು ಇರುವುದು ದೇಶದ ಮಹಾನಗರಗಳಲ್ಲಿ. ಮೊದಲ ಹಂತದ (ಟೈರ್ 1) ನಗರಗಳಲ್ಲಿ ಶೇಕಡ 36ರಷ್ಟು ಗ್ರಾಹಕರು ಇದ್ದಾರೆ. ಈ ವೇದಿಕೆಗಳಲ್ಲಿ ಲಭ್ಯವಿರುವ ಮನರಂಜನಾ ಹೂರಣವನ್ನು ಹೆಚ್ಚಾಗಿ ಬಳಕೆ ಮಾಡುತ್ತಿರುವವರು ಯುವಕರು – ಶೇಕಡ 89ರಷ್ಟು ಜನ 16ರಿಂದ 35 ವರ್ಷ ವಯಸ್ಸಿನ ನಡುವಿನವರು’ ಎಂದು ಕೌಂಟರ್‌ಪಾಯಿಂಟ್ ರಿಸರ್ಚ್ ಸಂಸ್ಥೆ ಹೇಳಿದೆ.

ನಮ್ಮಲ್ಲಿ, ಎರಡನೆಯ ಅಥವಾ ಮೂರನೆಯ ಹಂತಗಳ ನಗರಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಟಿ.ವಿ. ವಾಹಿನಿಗಳೇ ಮನರಂಜನಾ ಲೋಕವನ್ನು ಆಳುತ್ತಿವೆ. 16ರಿಂದ 35 ವರ್ಷ ವಯಸ್ಸಿನ ಗುಂಪಿಗೆ ಸೇರದವರು ಇಂದಿಗೂ ಹೆಚ್ಚಾಗಿ ವೀಕ್ಷಿಸುವುದು ಟಿ.ವಿ. ವಾಹಿನಿಗಳನ್ನು. ಈಗ ಟಿ.ವಿ. ಮೂಲಕವೇ ಒಟಿಟಿ ವೇದಿಕೆಗಳನ್ನು ಜನರಿಗೆ ತಲುಪಿಸಿದರೆ, ಅವುಗಳನ್ನು ವೀಕ್ಷಿಸುವವರ ಸಂಖ್ಯೆಯೂ ಹೆಚ್ಚಾಗುತ್ತದೆ. ಒಟಿಟಿ ವೇದಿಕೆಗಳನ್ನು ಆರಂಭಿಸಲು ಬೇಕಿರುವ ಹಣ ಟಿ.ವಿ. ವಾಹಿನಿಗಳನ್ನು ಆರಂಭಿಸಲು ಬೇಕಿರುವ ಹಣಕ್ಕಿಂತ ಕಡಿಮೆ. ಅಲ್ಲದೆ, ಹೊಸ ಕಾಲದ ಈ ವೇದಿಕೆಗಳಲ್ಲಿ ಟಿ.ವಿ. ವಾಹಿನಿಗಳಲ್ಲಿ ಲಭ್ಯವಿರುವುದಕ್ಕಿಂತ ವೈವಿಧ್ಯಮಯವಾದ, ಹೊಸ ಬಗೆಯ ಕಾರ್ಯಕ್ರಮಗಳು ಸಿಗುತ್ತಿವೆ. ಸ್ಮಾರ್ಟ್‌ಫೋನ್ ಬಳಕೆಯಲ್ಲಿ ಸಾಕ್ಷರರಾದವರಿಗೆ ಮಾತ್ರ ಇದುವರೆಗೆ ಲಭ್ಯವಿದ್ದ ಇಂತಹ ಹೂರಣ, ಇನ್ನು ಮುಂದೆ ಟಿ.ವಿ. ಬಳಕೆಯನ್ನು ಮಾತ್ರ ನೆಚ್ಚಿಕೊಂಡವರಿಗೂ ಹತ್ತಿರವಾಗಬಹುದು.

‘ಒಟಿಟಿ ವೇದಿಕೆಗಳ ಮೂಲಕ ಕಡಿಮೆ ಖರ್ಚಿನಲ್ಲಿ ಕೂಡ ಉತ್ತಮ ಕಾರ್ಯಕ್ರಮ ರೂಪಿಸಬಹುದು.

